**ಸಾಕ್ಷಿಗೆ ದಿನಾಂಕ 11.03.2024 ರಂದು -ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದಃ**
**(ಸಾಕ್ಷಿ ನ್ಯಾಯಾಲಯಕ್ಕೆ ವೀಲ್ ಚೇರಿನ ಮೂಲಕ ಬಂದಿರುತ್ತಾರೆ)**

**1.** ನಾನು ಈ ಪ್ರಕರಣದಲ್ಲಿ ತೆಗೆದುಕೊಂಡಿರುವ ನಿಲುವಿಗೆ ಸಂಬಂಧಿಸಿದಂತೆ ಹೆಚ್ಚುವರಿಯಾಗಿ ಈ ಕೆಳಕಂಡ ದಾಖಲೆಗಳನ್ನು ಹಾಜರು ಮಾಡುತ್ತಿದ್ದೇನೆ. ಸಾಕ್ಷಿಹಾಜರು ಮಾಡಿದ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನಿಕರಿಸಲಾಗಿರುತ್ತದೆ.:

| | |
|---|---|
| ನಿ.ಪಿ 16 | 2 ಮೆಡಿಕಲ್ ಬಿಲ್‌ಗಳು ಮೊತ್ತ ರೂ.67,000/- (ಅವುಗಳನ್ನು ಕ್ರಮವಾಗಿ ಕ್ರಮ ಸಂಖ್ಯೆ 1 ಮತ್ತು 2 ಎಂದು ತೋರಿಸಲಾಗಿರುತ್ತದೆ.) |
| ನಿ.ಪಿ 17 | ಸಿ.ಟಿ ಸ್ಕ್ಯಾನ್, ಕ್ಷ-ಕಿರಣ ಮತ್ತು ಲ್ಯಾಬ್ ವರದಿಗಳು (21 ಪುಟಗಳು) (ಒಟ್ಟಾಗಿ) |

**2.** ನನ್ನ ಮುಖ್ಯ ವಿಚಾರಣೆ ಸಾಕ್ಷ್ಯ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಪ್ರಕರಣದಲ್ಲಿ ಕೋರಿರುವ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ 1 ಮತ್ತು 2ನೇ ಎದುರುದಾರರ ಪರ ಶ್ರೀ. ಎಸ್ ಕೆ ಆರ್ ವಕೀಲರಿಂದಃ**

3. ಅಪಘಾತದ ದಿನ ನಾನು ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ನನಗೆ ಸಂಬಂಧಿಸಿದ್ದಾಗಿರುತ್ತದೆ. ನನ್ನ ದ್ವಿಚಕ್ರ ವಾಹನಕ್ಕೆ ವಿಮೆ ಇದ್ದು ಅದು ಯಾವ ಕಂಪನಿಯದ್ದು ಎಂದು ಗೊತ್ತಿರುವುದಿಲ್ಲ. ನನಗೆ ದ್ವಿಚಕ್ರ ವಾಹನ ಚಲಾಯಿಸಲು ಚಾಲನ ಪರವಾಗಿ ಪತ್ರ ಇರುವುದಿಲ್ಲ. ಆ ದಿನ ಕನಗಜನಹಳ್ಳಿಯಿಂದ ಹೆರಗು ಕಡೆಗೆ ಹೋಗುತ್ತಿದ್ದೆನು. ಟ್ರ್ಯಾಕ್ಟರ್ 3-4 ಅಡಿ ಅಂತರದಲ್ಲಿ ಹೋಗುತ್ತಿತ್ತು. ನಾನು ದ್ವಿಚಕ್ರ ವಾಹನವನ್ನು ಗಂಟೆಗೆ 40 ಕಿ ಮಿ ವೇಗಮಿತಿಯಲ್ಲಿ ಚಲಾಯಿಸುತ್ತಿದ್ದೆನು. ಟ್ರಾಕ್ಟರ್ ಚಾಲಕ ವೇಗವಾಗಿ ಚಲಾಯಿಸುತ್ತಿದ್ದನು ಎಷ್ಟು ವೇಗ ಎಂದು ಹೇಳಲು ಬರುವುದಿಲ್ಲ. ಸಾಮಾನ್ಯವಾಗಿ ಟ್ರಾಕ್ಟರ್ ವೇಗ

15-20 ಕಿ ಮಿ ಮಾತ್ರ ಎಂದರೆ ನನಗೆ ಗೊತ್ತಿಲ್ಲ. ಟ್ರ್ಯಾಕ್ಟರ್ ಚಾಲಕ ತನ್ನ ಮನೆಗೆ ಹೋಗಲು ಬಲಗಡೆಗೆ ತಿರುಗಿಸುತ್ತಿದ್ದನು ಎಂದರೆ ಯಾವುದೇ ಮುನ್ಸೂಚನೆ ನೀಡದೆ ತಕ್ಷಣಕ್ಕೆ ಬಲಗಡೆಗೆ ತಿರುಗಿಸಿರುತ್ತಾನೆ. ಎಡಭಾಗದಲ್ಲಿ ತುಂಬಾ ಜಾಗವಿದ್ದು ನಾನು ಹೋಗಬಹುದಾಗಿತ್ತು ಎಂದರೆ ಎಡಭಾಗವನ್ನು ಸಂಪೂರ್ಣವಾಗಿ ಟ್ರ್ಯಾಕ್ಟರ್ ಮತ್ತು ಟ್ರೈಲರ್ ಆವರಿಸಿಕೊಂಡಿತ್ತು. ಆ ದಿನ ಕೆಲಸ ಮುಗಿಸಿಕೊಂಡು ಟ್ರ್ಯಾಕ್ಟರ್ ಚಾಲಕ ಮನೆಗೆ ಟ್ರ್ಯಾಕ್ಟರ್ ಮತ್ತು ಟ್ರೈಲರನ್ನು ತೆಗೆದುಕೊಂಡು ಹೋಗುವಾಗ ನಾನು ಅತಿವೇಗವಾಗಿ ದ್ವಿಚಕ್ರ ವಾಹನವನ್ನು ಚಲಾಯಿಸಿಕೊಂಡು ಬಂದು ಟ್ರ್ಯಾಕ್ಟರ್‌ನ ಹಿಂದಿನ ಚಕ್ರಕ್ಕೆ ಗುದ್ದಿರುತ್ತೇನೆ ಎಂದರೆ ಸರಿ. ಅಪಘಾತವು ನನ್ನ ತಪ್ಪಿ ನಿಂದ ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಅಪಘಾತದ ಪರಿಣಾಮ ನನ್ನ ದ್ವಿಚಕ್ರ ವಾಹನದ ಮುಂಭಾಗ ಜಖಂ ಆಗಿರುತ್ತದೆ ಎಂದರೆ ಸರಿ. ನನಗೆ ದ್ವಿಚಕ್ರ ವಾಹನ ಚಲಾಯಿಸಲು ವಾಹನ ಚಾಲನಾ ಪರವಾಗಿ ಪತ್ರ ಇರಲಿಲ್ಲ ಮತ್ತು ವಾಹನಕ್ಕೆ ವಿಮೆ ಇರಲಿಲ್ಲ ಆದ ಕಾರಣ ಟ್ರ್ಯಾಕ್ಟರ್ ಚಾಲಕನ ವಿರುದ್ಧ ಸುಳ್ಳು ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

4. ಅಪಘಾತದ ನಂತರ ಎಸ್ ಎಸ್ ಎಂ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ಸದರಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರ ಪಡೆದು ಹಾಜರು ಪಡಿಸಲು ತೊಂದರೆ ಇರುವುದಿಲ್ಲ ಎಂದರೆ ಸರಿ. ನಂತರ ಕೆ ಎಸ್ ಹೆಗ್ಡೆ ಚಾರಿಟಬಲ್ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನನಗೆ ಅಪಘಾತದ ಪರಿಣಾಮವಾಗಿ ಗಾಯಗಳಾಗಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವೈದ್ಯಕೀಯ ಖರ್ಚು 5 ಲಕ್ಷ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಣ ಪತ್ರದ 4ನೇ ಖಂಡಿಕೆಯಲ್ಲಿ ನಮೂದು ಮಾಡಿರುವ ತೊಂದರೆಗಳು ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮತ್ತು ಹೈನುಗಾರಿಕೆಯಿಂದ ತಿಂಗಳಿಗೆ 25 ಸಾವಿರ ಸಂಪಾದಿಸುತ್ತಿದ್ದೆ ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಬಲ್ಲಿರ ಎಂದರೆ ಹಾಜರು ಪಡಿಸಬಲ್ಲೆನು. ನಾನು ವ್ಯವಸಾಯ ಮತ್ತು ಹೈನುಗಾರಿಕೆಯಿಂದ ತಿಂಗಳಿಗೆ 25 ಸಾವಿರ

ಸಂಪಾದಿಸುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆ ಕೆಲಸ ಮಾಡಬಹುದು ಎಂದರೆ ಸರಿಯಲ್ಲ. ಅಪಘಾತದ ದಿನ ಶಿರಸ್ತ್ರಾಣ ಧರಿಸಿರಲಿಲ್ಲ ಎಂದರೆ ಸರಿ. ಆ ದಿನ ಶಿರಸ್ತ್ರಾಣ ಧರಿಸದೇ ವೇಗವಾಗಿ ದ್ವಿಚಕ್ರ ವಾಹನ ಚಲಾಯಿಸಿದ ಪರಿಣಾಮ ನನ್ನ ತಲೆಗೆ ಪೆಟ್ಟಾಗಿರುತ್ತದೆ ಎಂದರೆ ಸರಿಯಲ್ಲ. ನಿ.ಪಿ.16ರಲ್ಲಿ ನಿ.ಪಿ.13ರ ಬಿಲ್ಲುಗಳು ಸೇರಿರುತ್ತವೆ ಎಂದರೆ ಸರಿಯಲ್ಲ. ನಿ.ಪಿ.13 ಮತ್ತು 16 ಬಿಲ್ಲುಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗಲೆಂದದು ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯುವ ಏಕೈಕ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ, ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ.ಇ)**

**3ನೇ ಹೆಚ್ಚುವರಿ ಲಘು ವ್ಯವಹಾರಗಳ**
**ನ್ಯಾಯಾಧೀಶರು, ಬೆಂಗಳೂರು.**